PAPERS LAID ON THE TABLE

SRI ALUR HANUMANTHAPPA (Deputy Minister for Minor Irrigation) :— Sir On behalf on the Hon'ble Minister for Revenue, I beg to lay on the Table, Notification No. G.S.R. 927 dated 30th April 1966 (The Mysore Agriculturist's Loans Rules, 1966) as required under sub-section (3) of section 9 of the Mysore Agriculturist's Loans Act, 1963.

MYSORE APPROPRIATION (No. 5) BILL, 1966.

Introduction.

SRI S. NIJALINGAPPA (Chief Minister)—On behalf of the Minister for Finance I beg to introduce the Mysore Appropriation (No. 5) Bill, 1966.

MR. SPEAKER.—The Mysore Appropriation (No. 5) Bill, 1966, is introduced.

MYSORE APPROPRIATION (No. 5) BILL, 1966—MOTION TO CONSIDER

SRI S. NIJALINGAPPA.—I beg to move:

That the Mysore Appropriation (No. 5) Bill, 1966, be taken into consideration "

MR. SPEAKER.—Motion moved :

" That the Mysore Appropriation (No. 5) Bill, 1966, be taken into consideration ".

Intimation has been received that the Governor has given necessary recommendation.**

I was trying to find out since morning 2 or 3 members to whom I could not give chance yesterday.

I would like to give 5 minutes to each of them if they are available. Sri V. S. Patil is not here.

SRI B. BHASKAR SHETTY (Kaup).—Sri K. P. Revanasiddappa may be given a chance . He did not get a chance yesterday.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ನಿನ್ನೆ ಶ್ರೀಮಾನ್ ಜತ್ತಿಯವರು ಉತ್ತರ ಕೊಡುವಾಗ ಆಹಾರದ ಅಭಾವದ ವಿಚಾರವಾಗಿ ಚರ್ಚೆ ನಡೆಸಬೇಕೆಂದು ಹೇಳಿದ್ದಕ್ಕೆ ಒಂದೆರಡು ಗಂಟೆ ಅವಕಾಶ ಕೊಡಬಹುದು ಎಂದು ಅವರು ಹೇಳಿದ ಹಾಗೆ ನನಗೆ ಜ್ಞಾಪಕ ಇದೆ. ಆ ಬಗ್ಗೆ ತಾವು ವಿಚಾರ ಮಾಡಿದ್ದೀರಾ ?

**Introduced on the recommendations of the Governor of Mysore.

MR. SPEAKER.—I have said that it will be given. Now Sri K. P. Revanasiddappa may speak.

†ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಅಧ್ಯಕ್ಷರೇ, ವ್ಯವಸಾಯದ ಇಲಾಖೆ ಮಂತ್ರಿಗಳನ್ನು ನೋಡಿದರೆ ಬೀಜ ಗೊಬ್ಬರಕ್ಕಾಗಿ ಕೋ ಆಪರೇಟೀವ್ ಡಿಪಾರ್ಟ್‌ಮೆಂಟಿಗೆ ಹೇಳಿದ್ದೇವೆ ಎಂದು ಹೇಳುತ್ತಾರೆ; ಅವರನ್ನು ಕೇಳಿದರೆ ಡಿಸ್ಟ್ರಿಕ್ಟ್ ಬ್ಯಾಂಕ್‌ನಲ್ಲಿ ಹಣವನ್ನು ಕೇಳಿದ್ದೇವೆ ಎಂದು ಹೇಳುತ್ತಾರೆ. ವ್ಯವಸಾಯದ ಇಲಾಖೆಯ ಅಧಿಕಾರಿಗಳನ್ನು ಕೇಳಿದರೆ, ಇಂಡೆಂಟ್ ಮಾಡಿದ್ದೇವೆ ಕಂಪೆನಿಯವರು ಕೊಟ್ಟಿಲ್ಲ ಎಂದು ಹೇಳುತ್ತಾರೆ. ಇವತ್ತು ಈ ರೀತಿಯಾಗಿ ಈ ವ್ಯವಸಾಯಕ್ಕೆ ಕೋ ಆಪರೇಟೀವ್ ಮಿನಿಸ್ಟರು ಮತ್ತು ಅಗ್ರಿಕಲ್ಚರಲ್ ಮಿನಿಸ್ಟರು ಮತ್ತು ಇನ್ನೂ ಅನೇಕ ಮಂತ್ರಿಗಳನ್ನು ನೋಡಿದರೂ ಕೂಡ ಯಾವ ಪ್ರಯೋಜನವೂ ಆಗುತ್ತಾ ಇಲ್ಲ. ರಾಗಿ ಮತ್ತು ಜೋಳದ ಬೆಳೆಗಳನ್ನು ಹಾಕಿ ಸುಮಾರು 2-3 ತಿಂಗಳು ಆದರೂ ಕೂಡ ಸಾಕಾದಷ್ಟು ಗೊಬ್ಬರವಾಗಲಿ, ಬೀಜವಾಗಲಿ ಯಾವುದೂ ಸಿಕ್ಕಿಲ್ಲ. ರಾಗಿ ಜೋಳದ ಬತ್ತನೆಯಾಗಿ ಮುಗಿಯುತ್ತಾ ಬಂತು ಇವತ್ತಿನವರೆಗೂ ಮೂರು ವೆರೈಟಿ ಗೊಬ್ಬರ ಮಿಕ್ಸ್ ಆಗಬೇಕೆಂದು ಹೇಳುತ್ತಾರೆ, ಯೂರಿಯಾ ಮಾತ್ರ ಬಂದಿದೆ ಇನ್ನು ಎರಡು ವೆರೈಟಿ ಬಂದಿಲ್ಲ, ತಾಲ್ಲೂಕು ಬೋರ್ಡಿನವರು ರೆಕಾರ್ಡ್ ಬರ್ಡ್ ಅಪ್ ಮಾಡಿಕೊಂಡು ಯಾರಿಗೆ ಇಟ್ಟಿದ್ದಾರೆ ಅವರಿಗೆ ಮಾತ್ರ ಅವನ್ನು ಇಟ್ಟಿದ್ದೇವೆ ಎಂದು ಹೇಳುತ್ತಾರೆ, ಇತರರಿಗೆ ಕೊಡುತ್ತಾ ಇಲ್ಲ ಎಂದು ಜನರು ಹೇಳುತ್ತಾರೆ. ಎಂದಮೇಲೆ ನಿಮ್ಮ ಕೃತಕ ಗೊಬ್ಬರ ಎಲ್ಲಿ, ಯಾವ ವ್ಯವಸಾಯಗಾರರಿಗೆ ದೊರೆಯುತ್ತದೆ? ಇದರಿಂದ ಯಾರಿಗೆ ಉಪಯೋಗವಾಗುತ್ತದೆ ಎಂಬುದನ್ನು ತಾವು ದಯವಿಟ್ಟು ಹೇಳಬೇಕು.

ಎರಡನೆಯದು ಇರಿಗೇಷನ್ ವೆರ್ಕ್ಸ್, ಎನ್. ಇ. ಎಸ್. ನಿಂದ ಕೊಟ್ಟಿದ್ದಾರೆ. ಬಡ್ಜೆಟ್ ಮಂಜೂರಾಗಿ 7-8 ತಿಂಗಳಾದರೂ ಕೂಡ ಎನ್.ಇ.ಎಸ್.ನಲ್ಲಿ ಬ್ರೇಕ್ ಅಪ್ ಫಿಗರ್ಸ್ ಬಂದಿಲ್ಲ ಎಂದು ಹೇಳುತ್ತಾರೆ. ಅದು ಯಾರು ಕಳುಹಿಸಬೇಕು? ಯಾವ ರೀತಿ ತೆಗೆದುಕೊಳ್ಳಬೇಕು? ಮಣ್ಣು ಬಾವಿ ತೆಗೆದಮೇಲೆ ಕುಸಿಯುತಕ್ಕ ಸಂದರ್ಭ ಇರುತ್ತದೆ. ಕೆಲವು ಸಂದರ್ಭದಲ್ಲಿ ಜಲ ಜಾಸ್ತಿಯಾಗಿ ಬರುತ್ತದೆ, ಕೊಟ್ಟಂಥ ಸಾವಿರಾರು ರೂಪಾಯಿ ಅನ್ಯಾಯವಾಗುತ್ತದೆ. ಸಾಲ ಸೋಲ ಸಿಕ್ಕಬೇಕಾದರೆ ಅಗ್ರಿಕಲ್ಚರಲ್ ಅಸಿಸ್ಟೆಂಟ್ ಡೈರೆಕ್ಟರ್‌ರವರು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ಇರುತ್ತಾರೆ. ಅವರನ್ನು ಕೇಳಿದರೆ ಇಂತಹ ಕಡೆ ಇಂಡೆಂಟ್ ಮಾಡಿದ್ದೇವೆ, ಇಂತಹ ಕಡೆ ಕೊಡುತ್ತಾರೆ ಎಂದು ಹೇಳುತ್ತಾರೆಯೇ ವಿನಾ ಅವರಿಗೆ ಯಾವ ವಿಧವಾದ ಜವಾಬ್ದಾರಿಯೂ ಕೂಡ ಇಲ್ಲ, ಅವರಿಗೆ ಡಿಸ್ಟ್ರಿಬ್ಯೂಟ್ ಮಾಡುವುದಕ್ಕೆ ಅವಕಾಶವಿಲ್ಲ. ಅಗ್ರಿಕಲ್ಚರಲ್ ಮಿನಿಸ್ಟರ್ ಎಂದಮೇಲೆ ಗೊಬ್ಬರ, ಬೀಜ ಅಥವಾ ವ್ಯವಸಾಯಕ್ಕೆ ಬೇಕಾದ ಉಪಕರಣ ಮತ್ತು ಇತರ ಸೌಲಭ್ಯಗಳನ್ನು ಕೊಡತಕ್ಕ ಜವಾಬ್ದಾರಿ ಯಾರಾದರೂ ಒಬ್ಬರಿಗೆ ಇರಬೇಕು, ಆ ರೀತಿ ಇದ್ದರೆ ನೇರವಾಗಿ ಅವರನ್ನು ಕಾಣಬಹುದು, ಕೆಲಸ ಕಾರ್ಯಗಳನ್ನು ಮಾಡಿಕೊಳ್ಳಬಹುದು. ಗೊಬ್ಬರದ ಇಂಡೆಂಟ್ ಮಾಡುವವರು ಸಹ ಯಾರಿಗೋ ತಮಗೆ ಬೇಕಾದವರಿಗೆ ಮಾಡಿ ಯಾವುದೋ ಕಂಪೆನಿಯ ಹಿತದೃಷ್ಟಿಯಿಂದ ಮಾಡಬಾರದು. ಇಷ್ಟು ದಿವಸದಲ್ಲಿ ನಷ್ಟೈ ಮಾಡಬೇಕು, ಇಲ್ಲದೇ ಇದ್ದರೆ ಅವರ ಆರ್ಡರನ್ನು ಕ್ಯಾನ್ಸಲ್ ಮಾಡುತ್ತೇವೆ, ಇಲ್ಲದೇ ಇದ್ದರೆ ಫೈನ್ ಕೊಡಬೇಕು ಎನ್ನುವಂತಹ ಒಂದು ನಿರ್ಬಂಧವನ್ನು ಹಾಕಬೇಕು. ಇವತ್ತು ರಾಗಿ ಮತ್ತು ಜೋಳದ ಬೆಳೆ ನೂರಕ್ಕೆ ಐವತ್ತರಷ್ಟು ಬಂದಂಥ ಫಸಲು ಹಾಳಾಗಿ ಹೋಗಿದೆ. ಕೆಲವು ಔಷಧಿ ಎರಚಬೇಕೆಂದು ಎನ್.ಇ.ಎಸ್. ಆಫೀಸಿನಲ್ಲಿ ಹೇಳುತ್ತಾರೆ, ಅದನ್ನು ಮಾಡಿಯೂ ಕೂಡ ಯಾವ ಪ್ರಯೋಜನವೂ ಆಗಿಲ್ಲ. ಫಾಲಡಾಲ್ ಕೂಡ ಸ್ಪ್ರೇ ಮಾಡಿದ್ದಾರೆ, ಅದರಿಂದ ಜನಗಳಿಗೆ ಏನು ತೊಂದರೆಯಾಗುತ್ತದೆಯೋ ಗೊತ್ತಿಲ್ಲ. ವ್ಯವಸಾಯದ ಇಲಾಖೆಯ ಅಧಿಕಾರಿಗಳು ತಕ್ಷಣ ಇದಕ್ಕೆ ನಿವಾರಣೋಪಾಯವನ್ನು ಕಂಡು ಹಿಡಿದು ನರಿಪಡಿಸದಿದ್ದರೆ ಮುಂದಿನ ವರ್ಷ ರಾಗಿ ಸಿಕ್ಕುವುದಿಲ್ಲ. ದೇಶಾದ್ಯಂತ ರಾಗಿ ಫಸಲು ಬಹಳವಾಗಿ ಕೆಟ್ಟು ಹೋಗಿದೆ ಎಂದು ಕೇಳುತ್ತಾ ಇದ್ದೇವೆ. ಸಾಮಾನ್ಯವಾಗಿ ಕಡೂರಿನಿಂದ ತಿಪಟೂರಿನವರೆಗೂ ಜೋಳ ಹಾಳಾಗಿ ಹೋಗಿದೆ ಇದಕ್ಕೆ ಗಮನ ಕೊಟ್ಟು ಯಾವ ವಿಧವಾದ ಔಷಧಿ ಹಾಕಬೇಕು, ಯಾವ ರೀತಿ ನಿವಾರಣೆ ಮಾಡಬಹುದು ಎಂಬುದನ್ನು ತೀವ್ರವಾಗಿ ಸರ್ಕಾರದವರು ಆಲೋಚನೆ ಮಾಡಬೇಕು. ಮತ್ತು ವ್ಯವಸಾಯಗಾರರಿಗೆ ಸಾಕಾದಷ್ಟು ಗೊಬ್ಬರದ ಸೌಲಭ್ಯ ಬತ್ತನೆಯ ಕಾಲಕ್ಕೆ ಮುಂಚಿತವಾಗಿ ಅವರ ಕೈ ಸೇರುವಂತೆ ಮಾಡಬೇಕೆಂದು ಸರ್ಕಾರದವರಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಆಹಾರದ ವಿಷಯದಲ್ಲಿ ಹೋದ ಸಾರಿ ಅನೇಕ ನಲಹೆಗಳನ್ನು ಮಾಡಿದ್ದೆವು. ಹೋಲ್‌ಸೇಲ್ ಡೀಲರ್ಸ್ 2½ ರೂಪಾಯಿ ಖರ್ಚು ಬೀಳತಕ್ಕ ಪದಾರ್ಥಕ್ಕೆ (ಜೋಳಕ್ಕೆ) 3 ರೂಪಾಯಿ ಕಮಿಷನ್ ಮತ್ತು ಗೋಡೌನ್ ಚಾರ್ಜಸ್ ಕೊಡುತ್ತಾ ಇದ್ದಾರೆ, ಇದನ್ನು ಒಂದು ರೂಪಾಯಿ ಎಂಟು ಆಣೆಗೆ

(ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ)

ಮಾಡುವುದಕ್ಕೆ ಅನೇಕರು ಸಿದ್ಧವಾಗಿದ್ದಾರೆ. ಅಂತಹವರಿಗೆ ಕೊಟ್ಟು ಕಡಿಮೆ ರೇಟ್‌ನಂತೆ ಜೋಳ ಸಿಕ್ಕುವಂತೆ ಮಾಡಬೇಕೆಂದು ಹೇಳಿದ್ದೆವು, ತಹಶೀಲ್ದಾರರಿಗೂ ಕೂಡ ಯಾವ ಕಾರ್ಯಕ್ರಮವನ್ನೂ ಕೂಡ ತೆಗೆದುಕೊಂಡಿಲ್ಲ. ಅಮೆರಿಕಾದಿಂದ ಬರತಕ್ಕ ಗೋಧಿಗೆ 30 ರೂಪಾಯಿ ಚಿಲ್ಲರೆ ಬಿದ್ದರೆ ಅದು ಮದರಾಸಿನಿಂದ ಬೆಂಗಳೂರಿಗೆ ಬರುವ ಹೊತ್ತಿಗೆ 22 ರೂಪಾಯಿ ಜಾಸ್ತಿ ಬೀಳುತ್ತದೆ. ಏಕೆ ಇಷ್ಟು ಖರ್ಚು ಬೀಳುತ್ತದೆ ಎಂಬುದನ್ನು ನೋಡಿ ಅದನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ ಎಂದು ನಂಬಿದ್ದೇನೆ. ರೈತರಿಗೆ ಅನುಕೂಲವಾಗಲಿ ಎಂದು ಅನೇಕ ಕಡೆ ಗೋಡೌನ್‌ಗಳನ್ನು ಕಟ್ಟಿಸಿದ್ದಾರೆ. ನೂರಕ್ಕೆ ತೊಂಭತ್ತೈದು ಜನರ ಮಾಲು ವರ್ತಕರ ಮಾಲು ಇದೆಯೇ ಏನಾ ರೈತರ ಮಾಲು ಇಲ್ಲ. ಹಣ ಇಲ್ಲದೇ ಇದ್ದದ್ದರಿಂದ ವರ್ತಕರು ಅಲ್ಲಿ ಇಟ್ಟಿದ್ದಾರೆ. ಧಾರಣೆ ವಾಸಿಗಳು ಹೆಚ್ಚಾಗುವುದಕ್ಕೆ ಇದೂ ಒಂದು ಕಾರಣ. ಬೆಳೆಯುವ ರೈತ ಎಷ್ಟು ಬೆಳೆದಿದ್ದಾನೋ ನೋಡಿಕೊಂಡು, ಅವನು ಎಷ್ಟು ಇಡಬಹುದು ಎಂಬ ಸರ್ಟಿಫಿಕೇಟ್ ತಹಸೀಲ್ದಾರರು ಅಥವಾ ರೆವಿನ್ಯೂ ಇನ್‌ಸ್ಪೆಕ್ಟರ್ ಇಂದ ತೆಗೆದುಕೊಂಡು ಬಂದರೆ ಮತ್ತೆ ಅಲ್ಲಿ ಇಡುವುದಕ್ಕೆ ಅವಕಾಶವಿದೆಯೇ ಹೊರತು ಇಲ್ಲದೇ ಇದ್ದರೆ ಇಲ್ಲ.

ಇನ್ನು ಈ ಫುಡ್ ಕಾರ್ಪೊರೇಷನ್‌ಯಿಂದ ಅಧಿಕಾರಿಗಳ ನಂಬಿಕೆ ಜಾಸ್ತಿಯಾಗುತ್ತಾ ಇದೆ, ಒಬ್ಬರ ಮೇಲೆ ಒಬ್ಬರು ಅಧಿಕಾರಿಗಳು ಇದ್ದು ಡೂಪ್ಲಿಕೇಷನ್ ಆಗಿದೆ. ಇದರಿಂದ ಪ್ರಯೋಜನ ವಾಗಿಲ್ಲ. ಇದನ್ನು ತೆಗೆದುಹಾಕಬೇಕೆಂದು ಕೇಂದ್ರ ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಂಡರೆ ನಮ್ಮ ಆಹಾರದ ಮೇಲೆ ಹೆಚ್ಚುವರಿಯಾಗುತ್ತಾ ಇರತಕ್ಕ ಧಾರಣೆವಾಸಿ ಕಡಿಮೆಯಾಗಬಹುದು ಎಂದು ನಾನು ಅಭಿಪ್ರಾಯಪಡುತ್ತೇನೆ.

ಹಣದ ಅಪಮೌಲ್ಯವಾದಮೇಲೆ ನಮ್ಮ ದೇಶದಲ್ಲಿ ದುಡ್ಡಿನ ಏರುಪೇರು ಬಹಳ ಜಾಸ್ತಿಯಾಗಿದೆ. ಇದಕ್ಕೆ ಇನ್ನೂ ಒಂದು ಕಾರಣ ಇದೆ, ಅದು ಕೊಯಮತ್ತೂರಿನ ನೋಟು. ಪ್ರೇಫರ್‌ನಲ್ಲಿ ಅದನ್ನು ತಯಾರು ಮಾಡುತ್ತಾ ಇರುವವರನ್ನು ಹಿಡಿದಿದ್ದೇವೆ ಎಂದು ಬರುತ್ತಾ ಇದೆಯೇ ಹೊರತು ಅವರಿಗೆ ಯಾವ ರೀತಿ ಕನ್‌ವಿಕ್ಷನ್ ಆಯಿತೇ, ಅವರನ್ನು ಫಾಸಿಗೆ ಹಾಕಿದರೇ ಇಲ್ಲವೇ, ಏನು ಮಾಡಿದರು, ಎಂಬುದು ಯಾವುದೂ ಕೂಡ ಬರುತ್ತಾ ಇಲ್ಲ. ಇದನ್ನು ಸರ್ಕಾರದವರು ಆಲೋಚನೆ ಮಾಡಿ ಸೂಕ್ತ ಕ್ರಮ ತೆಗೆದುಕೊಂಡರೆ ಹಣದ ಉಬ್ಬರವಾಗುವುದಕ್ಕೆ ಅವಕಾಶವಿಲ್ಲ. ಕೊಯಮತ್ತೂರಿನ ನೋಟು ಬಹಳ ಚಲಾವಣೆಯಲ್ಲಿ ಇದೆ. ಕೊಯಮತ್ತೂರಿನ ಒಂದು ನೂರು ರೂಪಾಯಿನ ನೋಟುಗಳು ಕೊರಟಗೆರೆ ತಾಲ್ಲೂಕು ತೀತಾ ಗ್ರಾಮದಲ್ಲಿ ಚಲಾವಣೆಯಾಗುತ್ತಿದ್ದವೆಂದು ಹೇಳಿ ಅಲ್ಲಿ ಒಬ್ಬ ವ್ಯಕ್ತಿಯನ್ನು ಅರೆಸ್ಟ್ ಮಾಡಿ ಅತನನ್ನು ಬೆಂಗಳೂರಿಗೆ ತಂದು ಇಲ್ಲಿ ಇನ್‌ವೆಸ್ಟಿಗೇಷನ್ ನಡೆಸುತ್ತಿದ್ದಾರಂತೆ. ಇದರ ಮೇಲೆ ಸರ್ಕಾರ ನಿಗಾ ಇಡಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಬಹಳ ಸ್ವಾರಸ್ಯವಾಗಿ ಮಾತನಾಡತಕ್ಕವರು ಅದರಂತೆ ಮಾತನಾಡಿದ್ದಾರೆ. ಇವರು ಆ ಕೊಯಮತ್ತೂರಿನ ನೋಟುಗಳ ವಿಚಾರವನ್ನು ಇಷ್ಟು ವಿಶದವಾಗಿ ಹೇಳಿದ್ದರಿಂದ ಸರ್ಕಾರದವರು ಇವರ ಮೇಲೆ ನಿಗಾ ಇಡಬೇಕಾಗಿದೆ. ಅಂದರೆ, ಈ ವಿಚಾರ ಅವರಿಗೆ ಇಷ್ಟು ಖಚಿತವಾಗಿ ಗೊತ್ತಿದ್ದರೆ ಅವರಿಗೇನು ಪೋಲೀಸ್ ಸಿಬ್ಬಂದಿ ಬೇಕೋ ಅದನ್ನು ಕೊಡಿಸೋಣ, ಮುಖ್ಯವಾಗಿ ಇವರು ಅಂಥದನ್ನು ಕಂಡುಹಿಡಿದರೆ ಬಹಳ ಸಂತೋಷ.

ಇನ್ನು ಗೊಬ್ಬರದ ವಿಚಾರ ಹೇಳಿದ್ದಾರೆ. ಆದರೆ ದೇಶಕ್ಕೆ ಎಷ್ಟು ಗೊಬ್ಬರ ಬೇಕೋ ಅಷ್ಟು ನಮ್ಮಲ್ಲಿ ಉತ್ಪತ್ತಿಯಾಗುತ್ತಿಲ್ಲ. ಅಷ್ಟೇ ಅಲ್ಲವೆ ರೈಲುಗಳ ಸೌಕರ್ಯವು ಇರಬೇಕಲ್ಲ. ಈಗ ಅದೆಲ್ಲವು ನಿವಾರಣೆಯಾಗಿದೆ. - ಹಿಂದೆ ಆ ರೀತಿಯಾಗಿ ಕೆಲವು ತೊಂದರೆಗಳಿದ್ದುದರಿಂದ ಸಾಕಷ್ಟು ಗೊಬ್ಬರವನ್ನು ಕೊಡುವುದಕ್ಕಾಗಲಿಲ್ಲ. ಅಷ್ಟು ಗೊಬ್ಬರವು ಇರಲಿಲ್ಲ. ಇನ್ನು ಮುಂದೆ ಇಷ್ಟು ತೊಂದರೆ ಯಿರಲಾರದೆಂದು ಹೇಳುತ್ತೇನೆ.

ಇನ್ನು ಮಾನ್ಯ ಸದಸ್ಯರು ಜೋಳದ ಬೆಳೆಯ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ಅವರ ಹೇಳಿಕೆಯಲ್ಲಿ ನೇಕಡ ಐವತ್ತರಷ್ಟು ಉತ್ಪೈಕ್ಷೆ ಇರುತ್ತದೆ. ಅವರು ಹೇಳುವಷ್ಟು ಆ ಬೆಳೆಗೆ ಅನಾಹುತ ವಾಗಿಲ್ಲ. ಅಲ್ಲಲ್ಲೇ ಕೆಲವು ಕಡೆ ಜೊಳಕ್ಕೆ ರೋಗ ತಗುಲಿದೆ. ಅದಕ್ಕೆ ಕಾರಣ ಹೋದ ವರ್ಷ ಮಳೆಬಾರದೆ ಭೂಮಿ ಬಹಳವಾಗಿ ಒಣಗಿತ್ತು. ಭೂಮಿ ಹಾಗೆ ಹೆಚ್ಚಿಗೆ ಒಣಗಿದ್ದರಿಂದ ಕೆಲವು ಹೊಸ ಕ್ರಿಮಿಕೀಟಗಳು ಉತ್ಪನ್ನವಾಗಿವೆ. ಆದರೆ ಅದಕ್ಕೆ ಮೆಳೆಯೇ ತಕ್ಕ ಔಷಧಿ; ಎಲ್ಲೆಲ್ಲಿ ಮಳೆ ಬಂದಿದೆಯೋ ಅಲ್ಲೆಲ್ಲಾ ಈ ರೋಗದ ಹಾವಳಿ ಬಹಳಮಟ್ಟಿಗೆ ಕಡಿಮೆಯಾಗಿದೆ. ಅಷ್ಟು ಶಿವಾಯಿ

ಮಾನ್ಯ ಸದಸ್ಯರು ಹೇಳುವಷ್ಟು ಬೆಳೆ ಕಟ್ಟಿಲ್ಲ. ಕೆಲವು ಹೊಸ ಹೊಸ ರೋಗಗಳೂ ಹುಟ್ಟಿವೆ. ಅವುಗಳನ್ನು ನಿರ್ಮೂಲ ಮಾಡಲು ತಕ್ಕ ಪ್ರಯೋಗಗಳನ್ನು ನಡೆಸಬೇಕು. ಅದಕ್ಕೆ ತಕ್ಕ ಔಷಧಿ ಗಳನ್ನು ಮತ್ತು ಉಪಕರಣಗಳನ್ನು ಕಂಡುಹಿಡಿಯಬೇಕು, ಆ ನಂತರ ಆ ಕ್ರಿಮಿಗಳನ್ನು ನಿರ್ಮೂಲ ಮಾಡಬೇಕು.

ಇಷ್ಟು ವಿಷಯಗಳ ಏನಾ ಅವರು ಮತ್ತೇನನ್ನೂ ಹೇಳಿಲ್ಲ. ಅವರು ಹೇಳಿರತಕ್ಕ ವಿಚಾರವಲ್ಲ ಮತ್ತು ಅವರು ಮಾಡಿರತಕ್ಕ ಸಲಹೆಗಳಲ್ಲಿ ವಿಚಾರ ಮಾಡಿ ಸತ್ಯಾಂಶ ಕಂಡು ಬಂದ ಕಡೆಗಳಲ್ಲಿ ಅದನ್ನು ಸರಿಪಡಿಸುವುದಕ್ಕೆ ತಕ್ಕ ಪ್ರಯತ್ನಗಳನ್ನು ಮಾಡಲಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ಅಭಾವವಿರತಕ್ಕ ಜಿಲ್ಲೆಗಳಿಗೆ ಸರ್ಕಾರದವರು ಸಾಲದ ರೂಪದಲ್ಲಿ ಬಿತ್ತನೆ ಬೀಜ ಮತ್ತು ಗೊಬ್ಬರಗಳನ್ನು ಒದಗಿಸುತ್ತೇವೆಂದು ಭರವಸೆ ಕೊಟ್ಟಿದ್ದರು ಅದನ್ನು ಕಾರ್ಯಗತ ಮಾಡಲು ಏನು ಕ್ರಮಗಳನ್ನು ಕೈಗೊಳ್ಳಲಾಗಿದೆ. ಎಂಬುದನ್ನು ತಿಳಿಸಲಿಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ಸರ್ಕಾರದವರು ಆಹಾರ ಬೆಳೆಗಳಿಗೆ ಸಹಾಯ ನೀಡಲು ಈಗ ಕೈಗೊಂಡಿರುವಷ್ಟು ಕಾರ್ಯ ಹಿಂದಿನ ಚರಿತ್ರೆಯಲ್ಲೇ ಎಲ್ಲೂ ಕಂಡುಬರುವುದಿಲ್ಲ. ಇಷ್ಟು ಸಹಾಯ ಗಳನ್ನು ಮಾಡಲಾಗಿದೆ. ಎಲ್ಲ ಮಳೆ ಬೆಳೆಗಳಾಗದೆ ಜನರಿಗೆ ಹೆಚ್ಚಿನ ತೊಂದರೆ ಆಗಿರುತ್ತದೋ ಅಂಥ ಕಡೆಗಳಿಗೆ ಆ ಸಹಾಯವನ್ನು ಕೊಡುವುದಕ್ಕೆ ಏರ್ಪಾಡು ಮಾಡಬಹುದು.

ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಮೈಸೂರು ಸ್ಟೇಟ್ ಕೋಆಪರೇಟೀವ್ ಮಾರ್ಕೆಟಿಂಗ್ ಸೊಸೈಟಿಯವರು ಗೊಬ್ಬರದ ಕೊರತೆಯಿದ್ದರೂ ಅದನ್ನು ಅಲ್ಲಿಗೆ ತರಲು ಅವರು ಖಾಸಗೀಯವರಿಗೆ ಅವಕಾಶ ಕೊಡುತ್ತಿಲ್ಲ, ಆ ತೊಂದರೆಯನ್ನು ತಪ್ಪಿಸುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಕೆಲವು ಕಡೆ ಅಂಥ ನ್ಯೂನತೆಗಳಿರಬಹುದು. ಆದರೆ ಅವುಗಳನ್ನು ಸರಿಪಡಿಸಲಾಗುವುದು· ಅಗತ್ಯಬಿದ್ದರೆ ಖಾಸಗಿಯವರಿಗೂ ಅವಕಾಶ ಮಾಡಿಕೊಡೋಣ.

ಶ್ರೀ ಟಿ. ಮಾದಯ್ಯಗೌಡ (ರಾಮನಗರ).—ಗೊಬ್ಬರದ ಧಾರಣೆಯನ್ನು ಇತ್ತೀಚೆಗೆ ಸೇಕಡ 30 –35 ರಷ್ಟು ಹೆಚ್ಚು ಮಾಡಿದ್ದಾರೆ ಎಂಬ ವದಂತಿ ಇದೆ. ಹಾಗೆ ಅದನ್ನು ಹೆಚ್ಚು ಬೆಲೆಗೆ ಮಾರಾಟ ಮಾಡುವುದನ್ನು ತಡೆಗಟ್ಟಲಾಗುತ್ತದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ವದಂತಿಗಳನ್ನು ನಂಬಿ ಕೆಲಸಮಾಡುವುದಕ್ಕಾಗುವುದಿಲ್ಲ. ಆ ರೀತಿ ಹೆಚ್ಚಿನ ದರದಲ್ಲಿ ಅಕ್ರಮವಾಗಿ ಅದನ್ನು ಮಾರಾಟ ಮಾಡುತ್ತಿದ್ದರೆ ಸಂಬಂಧಪಟ್ಟವರಿಗೆ ಬರೆದು ಅದನ್ನು ಸರಿಪಡಿಸೋಣ.

ಶ್ರೀ ಎಚ್. ಆರ್. ಕೇಶವಮೂರ್ತಿ (ಗೌಡಸಿ).—ಫ್ಯಾಮಿನ್‌ರಿಲೀಫ್‌ನಲ್ಲಿ ಪಿ. ಡಬ್ಲ್ಯೂ. ಡಿ. ಮೂಲಕ ಗ್ರಾಮಾಂತರ ಪ್ರದೇಶಗಳಲ್ಲಿ ಕೆರೆಗಳಿಗೆ ಮಣ್ಣು ಕಾಮಗಾರಿ ಕೆಲಸವನ್ನು ನಡೆಸ ಲಾಗಿತ್ತು. ಅದಕ್ಕೆ ಒದಗಿಸಿದ್ದುದು ಕೇವಲ ಒಂದು ಸಾವಿರ ರೂಪಾಯಿಗಳು ಮಾತ್ರ. ಆದರೆ ಆಗ ಅಲ್ಲಿ ಎಷ್ಟು ಮಣ್ಣು ಹಾಕಬೇಕಾಗಿತ್ತೋ ಅಷ್ಟನ್ನು ಹಾಕಲು ಹಣವಿರಲಿಲ್ಲ. ಅಂಥ ಕೆಲಸಗಳು ಎಲ್ಲೆಲ್ಲಿ ನಡೆದಿರುತ್ತವೆಯೋ ಅಲ್ಲಿಗೆ ಇನ್ನು 2—3 ಸಾವಿರ ರೂಪಾಯಿಗಳನ್ನು ಒದಗಿಸಿ ಆ ಕೆಲಸವನ್ನು ಶಾಶ್ವತವಾಗಿ ನಿಲ್ಲುವಂತೆ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲಿಯಾದರೂ ಹಾಗೆ ನಡೆಸಿದ್ದ ಕೆಲಸ ಕೆಟ್ಟುಹೋಗುತ್ತಿದೆ ಎಂಬುದನ್ನು ತಿಳಿಸಿದರೆ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಲಾಗುತ್ತದೆ. ಅಂಥ ಪುಕಾರು ಗಳು ಇದುವರೆಗೂ ವಿಲ್ಲಿಂದಲೂ ಬಂದಿಲ್ಲ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ನಾನು ಕೆಲವು ಪ್ರಶ್ನೆಗಳನ್ನು ಮಾಡಿದ್ದೆ. ಅದಕ್ಕೆಲ್ಲಾ ಸಮಂಜಸವಾದ ಉತ್ತರಗಳು ಬಂದಿಲ್ಲ. ಅವುಗಳಿಗೆಲ್ಲಾ ಯಾರು ಉತ್ತರ ಗಳನ್ನು ಕೊಡುತ್ತಾರೆ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರಿಗೆ ಯಾವತ್ತೂ ಸಮಂಜಸವಾದ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಆದರೆ ನಾನು ಕೊಟ್ಟ ಉತ್ತರವೇನೋ ಬಹಳ ಸಮಂಜಸವಾಗಿಯೇ ಇದೆ.

MR. SPEAKER.—What happened yersterday was: the Hon. Minister was given only half-an -hour and within that he had to cover many points. He gave an assurance that everything that has been said would be duly noted and action would be taken on all the criticism that has been made.

(MR. SPEAKER)

The question is :

"That the Mysore Appropriation (No. 5) Bill, 1966, be taken into consideration."

The motion was adopted.

MR. SPEAKER.—There are no amendments. I will put the clauses to the House. The question is :

"That clauses 2 and 3 stand part of the Bill."

The motion was adopted.

Clauses 2 and 3 were added to the Bill.

MR. SPEAKER.—The question is :

"That the Schedule stand part of the Bill."

The motion was adopted

The Schedule was added to the Bill.

MR. SPEAKER.—The question is :

"That clause 1, the Title and the Preamble stand part of the Bill."

The motion was adopted.

Clause 1, the title, and the Preamble were added to the Bill.

Motion to pass.

Sri S. NIJALINGAPPA.—I beg to move :

"That the Mysore Appropriation (No. 5) Bill, 1966, be passed."

MR. SPEAKER.—The question is :

"That the Mysore Appropriation (No. 5) Bill, 1966, be passed."

The motion was adopted.

THE BANGALORE UNIVERSITY (AMENDMENT) BILL, 1966.

Motion to consider.

Sri S. R. KANTHI (Minister for Education) .—Sir, I beg to move ;

"That the Bangalore University (Amendment) Bill, 1966, be taken into consideration."

MR. SPEAKER.—Motion moved :

"That the Bangalore University (Amendment) Bill, 1966, be taken into consideration."